# ಯಶೋದೆಯು ಶ್ರೀಕೃಷ್ಣನನ್ನು ಕಟ್ಟಿದಳೇ ?
## — ಒಂದು ತಾತ್ತ್ವಿಕ ಚಿಂತನೆ

❑ ಸ್ವಾಮಿ ರಾಘವೇಶಾನಂದ

**ಶ್ರೀಮದ್ ಭಾಗವತದಲ್ಲಿ ಬಾಲಗೋಪಾಲನ ಲೀಲೆಯ ಒಂದು ಪ್ರಸಂಗವನ್ನು ರೋಚಕವಾಗಿ ಬಣ್ಣಿಸಿ ಅದರ ಅರ್ಥವನ್ನು ಮನಮುಟ್ಟುವಂತೆ ತಿಳಿಸಿರುವ ಸ್ವಾಮಿ ರಾಘವೇಶಾನಂದಜಿಯವರು ಬೆಂಗಳೂರಿನಲ್ಲಿರುವ ಅಲಸೂರು ರಾಮಕೃಷ್ಣ ಮಠದ ಅಧ್ಯಕ್ಷರೂ ಉತ್ತಮ ಬರಹಗಾರರೂ ಹಾಗೂ ಪ್ರವಚನಕಾರರೂ ಆಗಿದ್ದಾರೆ.**

ಶ್ರೀಮದ್ ಭಾಗವತವು ಭಕ್ತಿಯನ್ನು ಹಲವು ರೀತಿಯಲ್ಲಿ ವಿಂಗಡಿಸುತ್ತದೆ. ಅದರಲ್ಲಿ ಒಂದು ವಿಧವಾದ ವಿಭಜನೆಯೆಂದರೆ ೧) ವಿದ್ವೇಷ ಭಕ್ತಿ ೨) ಜ್ಞಾನ ಭಕ್ತಿ ಹಾಗೂ ೩) ಮೂಢ ಭಕ್ತಿ. ವಿದ್ವೇಷ ಭಕ್ತಿ ಎಂದರೆ ಭಗವಂತನನ್ನು ದ್ವೇಷಿಸುವುದರ ಮೂಲಕ ಅವನ ಸಾಕ್ಷಾತ್ಕಾರ ಪಡೆಯುವುದು. ಭಾಗವತದಲ್ಲಿ ಅಸುರರಾದ ಹಿರಣ್ಯಕಶಿಪು, ಕಂಸ ಮುಂತಾದವರ ಉದಾಹರಣೆಯನ್ನು ನೋಡುತ್ತೇವೆ. ಜ್ಞಾನಭಕ್ತಿ ಎಂದರೆ ಜ್ಞಾನಮಾರ್ಗವನ್ನು ಅನುಸರಿಸಿ ಶ್ರೀಕೃಷ್ಣನ ಸಾಕ್ಷಾತ್ಕಾರವನ್ನು ಪಡೆಯುವುದು. ಶ್ರೀಮದ್ ಭಾಗವತದಲ್ಲಿ ಋಷಭ, ಭರತ, ಉದ್ಧವ ಮೊದಲಾದವರು ಜ್ಞಾನಭಕ್ತಿಗೆ ಉದಾಹರಣೆಗಳು. ಮೂಢಭಕ್ತಿ ಶ್ರೀಮದ್ ಭಾಗವತದಲ್ಲಿ ಅತ್ಯಂತ ವಿಶೇಷವಾದದ್ದು. ಶ್ರೀಕೃಷ್ಣನನ್ನು ಮನೋವಾಕ್ಕಾಯವಾಗಿ ಪ್ರೇಮಿಸುವವರು ಇಂತಹ ಭಕ್ತರು. ಇವರು ಅನಕ್ಷರಸ್ಥರಾಗಿರಬಹುದು, ಯಾವುದೇ ಮತಕ್ಕೆ ಸೇರದವರಾಗಿರಬಹುದು, ದೇವರ ಹಲವು ರೂಪ, ಭಾವಗಳ ಬಗ್ಗೆ ತಲೆ ಕೆಡಿಸಿಕೊಳ್ಳದವರಾಗಿರಬಹುದು ಮತ್ತು ದೇವರಿಂದ ಏನನ್ನೂ ನಿರೀಕ್ಷಿಸದವರಾಗಿರಬಹುದು. ಅವರಿಗೆ ತಿಳಿದಿರುವುದೆಲ್ಲಾ ಶ್ರೀಕೃಷ್ಣನನ್ನು ಪ್ರೇಮಿಸಿ, ಸದಾ ಅವನ ಚಿಂತನೆಯಲ್ಲಿರಬೇಕು ಎಂಬುದು ಮಾತ್ರ. ಈ ಭಕ್ತಿಯಲ್ಲಿ 'ಶ್ರೀಕೃಷ್ಣ ನನ್ನವನು' ಎಂಬ ಭಾವ ಬಿಟ್ಟರೆ ಬೇರೆ ಏನೂ ಇರುವುದಿಲ್ಲ. ಇದು ಹೊರ ನೋಟಕ್ಕೆ ಅತ್ಯಂತ ಸರಳವಾಗಿ ತೋರಿದರೂ ಇದನ್ನು ಅರ್ಥ ಮಾಡಿಕೊಳ್ಳುವುದು ತುಂಬಾ ಕಷ್ಟಕರವಾದದ್ದು. ಬೃಂದಾವನದ ಗೋಪಿಯರು ಇದಕ್ಕೆ ಉತ್ತಮ ಉದಾಹರಣೆ. ಶ್ರೀಕೃಷ್ಣನ ಬಾಲ ಲೀಲೆಗಳಲ್ಲಿ ಈ ಭಕ್ತಿಯ ಹಲವು ರೂಪಗಳನ್ನು ಕಾಣಬಹುದು. ಇವುಗಳನ್ನು ಕುರಿತು ಧ್ಯಾನ ಮಾಡುವುದರಿಂದಲೇ ಒಬ್ಬನು ಶ್ರೀಕೃಷ್ಣನ ದರ್ಶನವನ್ನು ಪಡೆಯಬಹುದು. ಯಶೋದೆ ಇಂತಹ ಭಕ್ತಿಗೆ ಒಂದು ಜ್ವಲಂತ ಉದಾಹರಣೆ. ಯಶೋದೆ ಶ್ರೀಕೃಷ್ಣನ ಮೇಲಿಟ್ಟಿದ್ದ ಪ್ರೀತಿಯನ್ನು ವಾತ್ಸಲ್ಯಭಕ್ತಿ ಎಂದು ಕರೆಯಬಹುದು.

ಶ್ರೀಮದ್‌ಭಾಗವತದಲ್ಲಿನ ಒಂದು ಘಟನೆ ಈ ಭಕ್ತಿಯ ಮಹಿಮೆಯನ್ನು ತಿಳಿಸುತ್ತದೆ. ಯಶೋದೆ ಶ್ರೀಕೃಷ್ಣನನ್ನು ಒರಳು ಕಲ್ಲಿಗೆ ಕಟ್ಟಿದ ಸನ್ನಿವೇಶದ ಬಗ್ಗೆ ನಮಗೆಲ್ಲಾ ಪರಿಚಯವಿದೆ. ಅದು ಹೊರನೋಟಕ್ಕೆ ಶ್ರೀಕೃಷ್ಣನ ಒಂದು ತುಂಟಾಟದಂತೆ ಕಂಡರೂ ಅದರಲ್ಲಿ ಬಹಳ ಅರ್ಥಗಳನ್ನು ಕಾಣಬಹುದು. ಭಾಗವತವನ್ನು ಆಧಾರವಾಗಿಟ್ಟುಕೊಂಡು ಇದನ್ನು ವಿಶ್ಲೇಷಿಸೋಣ.

ಒಮ್ಮೆ ಯಶೋದೆಯು, ತನ್ನ ಸೇವಕಿಯರು ಬೇರೆ ಬೇರೆ ಕಾರ್ಯಗಳಲ್ಲಿ ನಿಯುಕ್ತರಾಗಿದ್ದುದರಿಂದ ತಾನೇ ಮೊಸರು ಕಡೆಯುವ ಕಾರ್ಯದಲ್ಲಿ ತೊಡಗಿದ್ದಳು. ಕೈಗಳೇನೋ ಬಳೆಯ ಶಬ್ದಗಳೊಂದಿಗೆ ಹಿಂದಕ್ಕೆ ಮುಂದಕ್ಕೆ ಚಲಿಸುತ್ತಿದ್ದವು. ಮನಸ್ಸು ಮಾತ್ರ ತನ್ನ ಬಾಲಕೃಷ್ಣನ ಬಾಲಲೀಲೆಗಳನ್ನು ನೆನೆಯುತ್ತಿತ್ತು. ಅವುಗಳನ್ನು ಹಾಡಿನ ರೂಪದಲ್ಲಿ ಬಾಯಿಂದ ಹಾಡುತ್ತಿದ್ದಳು.

ಆಗ ಮುದ್ದುಕೃಷ್ಣನು ಅವಳನ್ನು ಅಲ್ಲಲ್ಲಿ ಹುಡುಕುತ್ತಾ, ಅವಳಿದ್ದಲ್ಲಿಗೆ ಬಂದು ತನ್ನ ಪುಟ್ಟ ಕೈಗಳಿಂದ ಕಡೆಗೋಲಿನ ಹಗ್ಗವನ್ನು ಹಿಡಿದು, ಕಡೆಯುವುದನ್ನು ನಿಲ್ಲಿಸಿ, "ಅಮ್ಮಾ, ನನಗೆ ತುಂಬಾ ಹಸಿವಾಗಿದೆ, ಹಾಲುಣಿಸು" ಎಂದು ಅತ್ತನು. ಆಕೆಯು ಕೂಡಲೇ ತನ್ನ ತೊಡೆಯ ಮೇಲೇರಿದ ಕೃಷ್ಣನ ಮುಗುಳ್ನಗೆಯಿಂದ ಕೂಡಿದ ಮುದ್ದು ಮುಖವನ್ನು ನೋಡುತ್ತಾ, ವಾತ್ಸಲ್ಯದಿಂದ ತನ್ನ ಎದೆಯ ಹಾಲನ್ನು ಉಣಿಸಲಾರಂಭಿಸಿದಳು.

ಅಷ್ಟರಲ್ಲೇ ಅಡುಗೆಮನೆಯಲ್ಲಿ ಕಾಯಿಸಲು ಒಲೆಯ ಮೇಲೆ ಇಟ್ಟಿದ್ದ ಹಾಲು ಉಕ್ಕಿ ಬರುತ್ತಿರಲು, ಕೃಷ್ಣನನ್ನು ಕೆಳಗಿಳಿಸಿ ಅಡುಗೆ ಮನೆಯತ್ತ ಹೊರಟಳು. ಕೃಷ್ಣನಿಗೆ ಇನ್ನೂ ಹೊಟ್ಟೆ ತುಂಬಿರಲಿಲ್ಲ. ತನ್ನನ್ನು ನಿರ್ಲಕ್ಷಿಸಿ ಹೊರಟು ಹೋದುದರಿಂದ, ಬಾಲ್ಯ ಸಹಜವಾದ ಕೋಪದಿಂದ ಕಂಪಿಸುತ್ತಿರುವ ಕೆಂಪು ತುಟಿಗಳನ್ನು ಹಲ್ಲುಗಳಿಂದ ಕಚ್ಚುತ್ತಾ, ಪಕ್ಕದಲ್ಲಿದ್ದ ಒಂದು ಅರೆಯುವ ಗುಂಡುಕಲ್ಲನ್ನು ತೆಗೆದುಕೊಂಡು, ಫಟಾರ್ ಎಂದು ಬೀಸಿ ಮೊಸರಿನ ಮಡಕೆಯನ್ನು ಒಡೆದನು. ಅದರಿಂದಲೂ ತೃಪ್ತನಾಗದೆ ಕಪಟದ ಕಣ್ಣೀರು ಸುರಿಸುತ್ತಾ, ಒಳಮನೆಗೆ ಹೋಗಿ, ಗುಟ್ಟಾಗಿ, ಅಲ್ಲಿಟ್ಟಿದ್ದ ಬೆಣ್ಣೆಯನ್ನು ತಿನ್ನಲಾರಂಭಿಸಿದನು.

ಸ್ವಲ್ಪ ಹೊತ್ತಿನಲ್ಲೇ ಒಂದೆರಡು ಕೋತಿಗಳು ಅಲ್ಲಿಗೆ ಬಂದವು. ಅವುಗಳಿಗೂ ಬೆಣ್ಣೆಯನ್ನು ಹಂಚಿ, ತಿನ್ನಿಸಲಾರಂಭಿಸಿದನು. ಇತ್ತ ಯಶೋದೆ, ಅಡುಗೆ ಮನೆಯಲ್ಲಿ ತನ್ನ ಕೆಲಸವನ್ನು ಮುಗಿಸಿ ಮತ್ತೆ ಅಂಗಳಕ್ಕೆ ಬಂದಾಗ, ತನ್ನ ಪ್ರೀತಿಯ ಕಂದ ಮಡಕೆಯನ್ನು ಒಡೆದು ಚೂರುಚೂರು ಮಾಡಿ, ಮೊಸರೆಲ್ಲಾ ಭೂಮಿಯ ಪಾಲಾಗಿರುವುದನ್ನು ನೋಡಿ ತನ್ನಲ್ಲೇ ನಗುತ್ತಾ, ಅವನನ್ನು ಹುಡುಕಿಕೊಂಡು ಒಳಮನೆಗೆ ಬಂದಳು.

ಇದರಲ್ಲಿ ನಾವು ಒಂದು ಪಾಠವನ್ನು ಕಲಿಯಬೇಕು. ನಾವೇನಾದರೂ ಭಗವಂತನನ್ನು ಮರೆತು, ಬರಿಯ ಐಹಿಕ

ವಿಷಯಗಳಿಗೇ ಮನಸ್ಸನ್ನು ಕೊಟ್ಟರೆ, ನಮ್ಮ ಸಂಪತ್ತೆಲ್ಲಾ, ಆ ಮೊಸರಿನಂತೆ ಮಣ್ಣುಪಾಲಾಗುವುದು.

ಒಳಮನೆಯಲ್ಲಿ ಕೃಷ್ಣನು ಮೊಗಚಿಹಾಕಿರುವ ಒಂದು ಒರಳಿನ ಕಲ್ಲಿನ ಮೇಲೆ ನಿಂತು ನೆಲುವಿನಲ್ಲಿಟ್ಟಿರುವ ಬೆಣ್ಣೆಯನ್ನು ತೆಗೆದು, ಪಕ್ಕದಲ್ಲಿರುವ ಕೋತಿಯೊಂದಕ್ಕೆ ಯಥೇಚ್ಛವಾಗಿ ತಿನ್ನಿಸುತ್ತಿದ್ದನು. ಯಶೋದೆ ಕಳ್ಳ ಕೃಷ್ಣನನ್ನು ಹಿಡಿಯಲು, ನಿಧಾನವಾಗಿ ಅವನ ಹಿಂದಿನಿಂದ ಬಂದಳು. ಆ ತುಂಟ ಕೃಷ್ಣನ ಕಣ್ಣು ತಪ್ಪಿಸಲು ಸಾಧ್ಯವೇ? ತಕ್ಷಣ ಅವನು ಹೆದರಿದವನಂತೆ ನಟಿಸುತ್ತಾ, ಪುಟ್ಟ ಪುಟ್ಟ ಹೆಜ್ಜೆಗಳೊಡನೆ ಹೊರಗೆ ಓಡಿದನು. ಯಶೋದೆಯೂ ಅವನನ್ನು ಹಿಡಿಯಲು ಹಿಂಬಾಲಿಸಿ ಓಡಿದಳು. ಆದರೆ ಅವನು ಕೈಗೆ ಸಿಕ್ಕಿದರೆ ತಾನೆ? ಯೋಗಿಗಳ ಮನಸ್ಸು ಸಹ ತಪಸ್ಸಿನಿಂದ ಪ್ರೇರಿತವಾದಾಗ ಮಾತ್ರ ಪರಮಾತ್ಮನನ್ನು ತಮ್ಮ ಮನಃಪಟಲದಲ್ಲಿ ಹಿಡಿಯಲು ಸಮರ್ಥರಾಗುತ್ತಾರೆ. ಅಂತಹವನನ್ನು ಸಾಧಾರಣ ಸ್ತ್ರೀ ಯಶೋದೆ ಸುಲಭವಾಗಿ ಹಿಡಿಯಲು ಸಾಧ್ಯವೇ? ಚೆನ್ನಾಗಿ ಆಟವಾಡಿಸಿ ಕೊನೆಗೆ ತನ್ನ ತಾಯಿಯು ಪರಿಶ್ರಮದಿಂದ ಸುಸ್ತಾಗಿ ಬೆವರಲು ಶುರುವಾದಾಗ, ಶ್ರೀಕೃಷ್ಣ ಅವಳಿಂದ ಹಿಡಿಸಿಕೊಳ್ಳುವ ನಾಟಕವಾಡಿದ. ಆ ನಾಟಕದ ಪಾತ್ರವನ್ನು ಚೆನ್ನಾಗಿ ಆಡಿದ. ಬೆದರಿದಂತೆ ಅಳುತ್ತ, ಕಾಡಿಗೆ ಹಚ್ಚಿರುವ ಕಣ್ಣುಗಳನ್ನು ತನ್ನ ಪುಟ್ಟ ಕೈಗಳಿಂದ ಉಜ್ಜಿಕೊಳ್ಳುತ್ತಾ ಯಶೋದೆಯ ಕೈಗೆ ಸಿಕ್ಕಿಬಿದ್ದ. ಮಗುವಿನಲ್ಲಿ ಅತ್ಯಂತ ವಾತ್ಸಲ್ಯ ಉಳ್ಳವಳಾಗಿದ್ದ ಯಶೋದೆ, ಅವನ ಅಂತಃಸತ್ವವನ್ನು ಸ್ವಲ್ಪವೂ ತಿಳಿಯದವಳಾಗಿ, ಕೃಷ್ಣನು ಹೆದರಿದ್ದಾನೆಂದು ತಿಳಿದು ತನ್ನ ಕೈಯಲ್ಲಿದ್ದ ಕೋಲನ್ನು ಬಿಸಾಡಿದಳು. ಆದರೂ ಏನಾದರೂ ಒಂದು ಚಿಕ್ಕ ಶಿಕ್ಷೆ ಕೊಡಬೇಕೆಂದೆನಿಸಿ, ಅವನನ್ನು ಸ್ವಲ್ಪಹೊತ್ತು ಕಟ್ಟಿಹಾಕೋಣ ಎಂದುಕೊಂಡಳು.

ಇಲ್ಲಿ ಸ್ವಲ್ಪ ಯೋಚಿಸಬೇಕು—ಯಶೋದೆ ಯಾರನ್ನು ಕಟ್ಟಿಹಾಕಲು ಹೋದಳು? ಯಾವ ಪರಮಾತ್ಮಸ್ವರೂಪಕ್ಕೆ ಒಳಹೊರಗೆಂಬುದು ಇಲ್ಲವೋ ಹಿಂದುಮುಂದೆಂಬುದು ಇಲ್ಲವೊ ಯಾರು ಈ ಜಗತ್ತಿಗೆ ಹಿಂದುಮುಂದು ಒಳಹೊರಗು ಆಗಿರುವನೊ, ಯಾರು ಭಕ್ತರ ಪ್ರೇಮದಿಂದ ಆಕರ್ಷಿತನಾಗಿ ತನ್ನ ಸ್ವಸ್ವರೂಪವನ್ನು ಹೊರಪಡಿಸದೆ ಮಾನುಷ ಲಕ್ಷಣಗಳಿಂದ ತೋರುತ್ತಿರುವನೊ ಅಂತಹ ತ್ರಿಲೋಕಾಧೀಶನನ್ನು ಯಶೋದೆಯು ತನ್ನ ಶಿಶುವೆಂದು ಎಣಿಸಿ ಕಟ್ಟಿಹಾಕಲು ಯತ್ನಿಸಿದಳು. ಕಟ್ಟಿಹಾಕಲು ಯತ್ನಿಸುತ್ತಿರುವವರು ಯಾರು? ಋಷಿ, ಮುನಿ, ದೇವತೆ, ಅವಧೂತ ಅಥವಾ ಸಪ್ತರ್ಷಿಗಳಲ್ಲಿ ಒಬ್ಬರೆ? ಇವರೆಲ್ಲ ಸಹಸ್ರಾರು ವರ್ಷಗಳಿಂದ ತಪಸ್ಸು ಮಾಡುತ್ತ ತಮ್ಮ ಮನಸ್ಸಿನ ಅಂತರಾಳದಲ್ಲಿ ಭಗವಂತನನ್ನು ಕಟ್ಟಿಹಿಡಿಯಲು ಪ್ರಯತ್ನಿಸಿ ವಿಫಲರಾಗುತ್ತಿದ್ದಾರೆ. ಅಂತಹವರಿಂದಲೇ ಸಾಧ್ಯವಾಗದ ಪರಮಾತ್ಮನನ್ನು ಒಬ್ಬ ಸಾಧಾರಣ ಗೋಪಿಕಾಸ್ತ್ರೀ ಬಂಧಿಸಲು ಯತ್ನಿಸುತ್ತಿರುವಳಲ್ಲಾ! ಇದೊಂದು ಮಹದಾಶ್ಚರ್ಯವಲ್ಲವೆ? ಆ ಮುದ್ದು ಕೃಷ್ಣನನ್ನು ಕಟ್ಟಲು ಅವಳು ಏನಾದರೂ ರೇಶ್ಮೆಯ ವಸ್ತ್ರವನ್ನು ತಂದಳೆ? ಅಥವಾ ಬಂಗಾರದ ಚೈನನ್ನು ತಂದಳೆ? ಕರುವನ್ನು ಕಟ್ಟುವ ಸಾಧಾರಣ ಹಗ್ಗ. ಅದೂ ಕೂಡ ಕೃಷ್ಣನ ಲೀಲೆ. ಭಕ್ತರುಗಳಿಂದ ದಾಮೋದರ ಎಂಬ ಹೆಸರಿನಿಂದ ಕರೆಸಿಕೊಳ್ಳಲು ಅವನಿಗೆ ಇಚ್ಛೆಯಾಗಿತ್ತೇನೊ. ದಾಮ ಎಂದರೆ ಹಗ್ಗ, ಉದರ ಎಂದರೆ ಹೊಟ್ಟೆ. ಅದಕ್ಕೇ ಅಂದಿನಿಂದ ಭಕ್ತರು ಕೃಷ್ಣನನ್ನು ದಾಮೋದರಾಯ ನಮಃ ಎಂದು ಅರ್ಚಿಸುತ್ತಾರೆ.

ಆ ಹಗ್ಗದಿಂದ ಕೃಷ್ಣನನ್ನು ಯಶೋದೆಯು ಒಂದು ಸಾಧಾರಣ ಒರಳಿಗೆ ಕಟ್ಟಲು ಇಚ್ಛಿಸಿದಳು. ಅಂದರೆ ಸಾಮಾನ್ಯ ಸ್ಥಳದಲ್ಲಿ ಸಾಮಾನ್ಯ ಹಗ್ಗದಿಂದ ಸಾಮಾನ್ಯ ಒರಳಿಗೆ ಸಾಮಾನ್ಯ ಸ್ತ್ರೀ ಅಸಾಮಾನ್ಯನಾದ ಕೃಷ್ಣನನ್ನು ಕಟ್ಟಲು ಯೋಚಿಸಿದಳು. ಹಾಗೆ ಯಾಕೆ ಯೋಚಿಸಿದಳು? ಆತ್ಮಜಂ ಮತ್ವಾ ಅಂದರೆ ಕೃಷ್ಣನನ್ನು ತನ್ನವನೆಂದು ನೆನೆಸಿ. ನಾವು ಯಾವಾಗಲೂ ದೇವರನ್ನು ಬೇರೆಯವನೆಂದು ಭಾವಿಸುತ್ತೇವೆ. ಆದುದರಿಂದಲೇ ಅವನು ನಮಗೆ ಯಾವ ರೀತಿಯಲ್ಲೂ ಲಭ್ಯವಾಗುತ್ತಿಲ್ಲ. ನಾವು ಅವನನ್ನು ಆತ್ಮಜಂ ಎಂದು ನೆನೆದಿದ್ದರೆ ಧ್ಯಾನಮಾಡುವಾಗ ನಮ್ಮ ಮನಃಪಟಲದಲ್ಲಿ ನಿರಂತರವಾಗಿ ಅವನು ನಿಲ್ಲುತ್ತಿದ್ದನು. ಅವಳು ಕೃಷ್ಣನನ್ನು ಬ್ರಹ್ಮಸ್ವರೂಪ ಎಂದು ತಿಳಿಯುವ ಗೋಜಿಗೆ ಹೋಗಲಿಲ್ಲ; ಸಾಕಾರನೇ, ನಿರಾಕಾರನೇ ಎಂದು ಚಿಂತಿಸುವ ಗೊಂದಲಕ್ಕೆ ಹೋಗಲಿಲ್ಲ. ಅವಳಿಗೆ ತನ್ನ ಮಗ ಮಾತ್ರ ಗೊತ್ತು, ಅದೂ ಬೆಣ್ಣೆಯನ್ನು ಕದ್ದ ಮಗನೆಂದು ಮಾತ್ರ ಗೊತ್ತು. ವಾತ್ಸಲ್ಯ ಪ್ರೇಮಕ್ಕೆ ಕಟ್ಟುಬಿದ್ದು ಕೃಷ್ಣನು ಅವಳ ಮನೋರಥವನ್ನು ಈಡೇರಿಸಿಬಿಟ್ಟನು. ಆಹಾ! ವಾತ್ಸಲ್ಯಪ್ರೇಮ ಎಷ್ಟು ಅಗಾಧವಾದದ್ದು! ಋಷಿಮುನಿಗಳಿಗೂ, ತಪಸ್ಸಿನಲ್ಲಿ ನಿರತರಾಗಿರುವ ಸಾಧಕರಿಗೂ ಲಭ್ಯವಾಗದ ಭಗವಂತನು ಯಶೋದೆಗೆ ಸುಲಭವಾಗಿ ಲಭ್ಯವಾದನು.

ಇದು ಹೀಗಾದರೆ, ಒರಳು ತನಗೆ ತಾನೇ ಯೋಚಿಸಿತಂತೆ. ಜಡ ವಸ್ತುವಾದ ಒರಳು ಹೇಗೆ ಯೋಚಿಸಲು ಸಾಧ್ಯ ಎಂದುಕೊಳ್ಳಬೇಡಿ. ಶ್ರೀಕೃಷ್ಣನ ಪಾದಸ್ಪರ್ಶದಿಂದ ಅದೂ ಚೈತನ್ಯಮಯವಾಯ್ತು. ಅದು ಯೋಚಿಸಿತಂತೆ: "ಕೃಷ್ಣನು ತಪ್ಪು ಮಾಡಿದ ಸರಿ. ಆದರೆ ಅದಕ್ಕಾಗಿ ನನ್ನನ್ನು ಏಕೆ ಕಟ್ಟಿಹಾಕುತ್ತಿದ್ದಾಳೆ? ಓಹೋ ನಾನು ಆ ಕಳ್ಳನಿಗೆ ಬೆಣ್ಣೆ ಕದಿಯುವಾಗ ನನ್ನ ಮೇಲೆ ನಿಲ್ಲಲು ಆಶ್ರಯ ಕೊಟ್ಟೆ. ಕಳ್ಳನಿಗೆ ಸಹಾಯ ಮಾಡಿದುದರಿಂದ ನಾನೂ ಕಳ್ಳನೇ ಎಂದು ಭಾವಿಸಿರಬಹುದು. ಅದಕ್ಕೇ ಇಬ್ಬರನ್ನೂ ಶಿಕ್ಷಿಸುತ್ತಿದ್ದಾಳೆ. ಆದರೆ ಇಬ್ಬರು ಕಳ್ಳರನ್ನು ಮತ್ತೆ ಒಟ್ಟಿಗೆ ಸೇರಿಸುತ್ತಿದ್ದಾಳಲ್ಲಾ! ಇದರಿಂದ ನಮ್ಮ ಕಳ್ಳತನ ಹೆಚ್ಚಾಗುವುದಲ್ಲವೇ? ಓಹೋ! ಅವಳು ಯೋಚಿಸುತ್ತಿರಬಹುದು, ಅತಿ **ಸನ್ನಿಕರ್ಷಾತ್ ಸಹಕಾರಿ ವಿಜಾನಾತಿ,** ಅಂದರೆ ಅತಿ ಸಮೀಪಕ್ಕೆ ಬರುವುದರಿಂದ ಒಬ್ಬ ಪಾಠ ಕಲಿಯುತ್ತಾನೆ ಎಂದು. ಅಗ್ನಿಯ ಸಮೀಪಕ್ಕೆ ಬಂದು ನಾವು ಒಮ್ಮೆ ಕೈಸುಟ್ಟುಕೊಂಡರೆ ಮತ್ತೆ ಅದರ ಬಳಿಗೆ ಹೋಗುವುದಿಲ್ಲ. ನಾನು ಜಡವಾದರೂ ತನ್ನ ಪುಟ್ಟ ಕಾಲುಗಳನ್ನು ನನ್ನ ಮೇಲಿಟ್ಟು ನನ್ನ ಮೈಯೆಲ್ಲಾ ಪುಲಕಿತ



ವಾಗುವಂತೆ ಮಾಡಿದ್ದಾನೆ. ಅವನನ್ನು ಬಿಟ್ಟು ನನ್ನಿಂದ ಇನ್ನು ಇರಲಾಗುವುದಿಲ್ಲ ಎಂದು ತಿಳಿದು ಪರಮಕಾರುಣ್ಯದಿಂದ ಅವನೊಡನೆಯೇ ಇರುವಂತೆ ಯಶೋದೆ ಮಾಡಿದ್ದಾಳೆ. ಯಾವ ಮಾನವನು ತಾನೆ ನನ್ನಷ್ಟು ಧನ್ಯ!" ಯಶೋದೆಯು ಶ್ರೀಕೃಷ್ಣನನ್ನು ದಾಮದಿಂದ ಅಂದರೆ ಹಗ್ಗದಿಂದ ಕಟ್ಟಿದಳು. ಅನನ್ಯ ಭಕ್ತಿಯಿರುವ ನಾವು ಅವನನ್ನು ನಮ್ಮ ಮನಸ್ಸಿನಲ್ಲಿ ಕಟ್ಟಿ ಇರಿಸಿಕೊಳ್ಳಲು ಸಾಧ್ಯವಿಲ್ಲವೆ? ಇದೆ, ಯಾಕಿಲ್ಲ? ಆದರೆ ಸ್ಥೂಲವಾದ ದಾಮದಿಂದಲ್ಲ. ಸೂಕ್ಷ್ಮರೂಪ ದಾಮವಾದ ನಾಮದಿಂದ. **ನಾಮಸ್ಮರಣಾತ್ ಅನ್ಯೋಪಾಯಂ, ನ ಹಿ ಪಶ್ಯಾಮೋ ಭವ ತರಣೇ** —"ಈ ಕಲಿಯುಗದಲ್ಲಿ ಸಂಸಾರಸಾಗರವನ್ನು ದಾಟಲು ನಾಮಸ್ಮರಣೆಗಿಂತ ಬೇರೆ ಯಾವ ಮಾರ್ಗವೂ ಇಲ್ಲ." ನಿತ್ಯ ನಿರಂತರವಾದ ನಾಮಸ್ಮರಣೆಯಿಂದ ಭಗವಂತನನ್ನು ಕಟ್ಟಿ ಹಾಕಲು ಸಾಧ್ಯ.

ಅವನ ಲೀಲೆ ಇಲ್ಲಿಗೇ ಮುಗಿಯಲಿಲ್ಲ. ಯಶೋದೆಯನ್ನು ಇನ್ನೂ ಆಟವಾಡಿಸಲು ಇಚ್ಛಿಸಿದ. ಹಗ್ಗದ ಒಂದು ತುದಿಯನ್ನು ಒರಳಿಗೆ ಕಟ್ಟಿ, ಮತ್ತೊಂದು ತುದಿಯಿಂದ ಅವನ ನಡುವನ್ನು ಕಟ್ಟಲು ಯತ್ನಿಸಿದಳು. ಆದರೆ ಆ ಹಗ್ಗ ಎರಡು ಅಂಗುಲದಷ್ಟು ಸಾಲದೆ ಹೋಯಿತು. ಒಳಗೆ ಹೋಗಿ ಮತ್ತೊಂದು ಹಗ್ಗವನ್ನು ತಂದಳು. ಆದರೆ ಅದೂ ಸಾಲದೇ ಹೋಯಿತು. ಮನೆಯಲ್ಲಿದ್ದ ಎಲ್ಲಾ ರೀತಿಯ ಹಗ್ಗಗಳನ್ನೂ ತಂದಳು. ಯಾವುದೇ ಹಗ್ಗವನ್ನು ತಂದು ಗಂಟುಹಾಕುತ್ತಿದ್ದರೂ ಅದು ಎರಡು ಅಂಗುಲ ಕಡಮೆಯಾಗುತ್ತಿತ್ತು. ಬಾಲಕೃಷ್ಣನು ಏನು ಮಾಡಿದರೂ ಅದಕ್ಕೆ ಒಂದು ಅರ್ಥವಿರುತ್ತದೆ. ಹಗ್ಗ ಎಂದರೆ ಕರ್ಮ. ಕರ್ಮಗಳು ಹಲವು ರೀತಿಯವು. ಒಮ್ಮೆ ಒಂದು ಕರ್ಮದಲ್ಲಿ ಸಿಕ್ಕಿಬಿದ್ದರೆ, ಒಂದರಿಂದ ಮತ್ತೊಂದಕ್ಕೆ, ಅದರಿಂದ ಮತ್ತೊಂದಕ್ಕೆ ಹೀಗೆ ಕರ್ಮಗಳ ಸರಪಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ ಮನುಷ್ಯ. ಇದೇ ಕರ್ಮ ಬಂಧನ. ಆದರೆ ಶ್ರೀಕೃಷ್ಣನನ್ನು ಕರ್ಮದಿಂದ ಬಂಧಿಸಲು ಸಾಧ್ಯವೇ? ಕರ್ಮಗಳ ಸರಪಳಿಗಳ ಮಧ್ಯದಲ್ಲೇ ಇದ್ದರೂ ಅವನನ್ನು ಯಾವ ಕರ್ಮವೂ ಬಂಧಿಸಲು ಸಾಧ್ಯವಿಲ್ಲ.

ಇನ್ನೊಂದು ವಿಚಾರ ಮಾಡಬೇಕಾದ ವಿಷಯ. ಅದು ಎಲ್ಲ ಬಾರಿಯೂ ಎರಡು ಅಂಗುಲದಷ್ಟು ಮಾತ್ರ ಕಡಮೆಯಾಗುತ್ತಿದ್ದುದಕ್ಕೆ ಕಾರಣವೇನು? ಭಗವಂತನಿಗೆ ಎರಡು ವಿಧವಾದ ಶಕ್ತಿಗಳುಂಟು. ಒಂದು ವ್ಯಾಪಕತ್ವ ಮತ್ತೊಂದು ಪೂರ್ಣತ್ವ. ಯಾರಿಗಾದರೂ ಇವೆರಡನ್ನು ಬಂಧಿಸಲು ಸಾಧ್ಯವೇ? ಅಲ್ಲದೆ ಆತನು ಅವಿನಾಶಿ ಹಾಗೂ ಅದ್ವಿತೀಯ. ಹಾಗಿರುವಾಗ ಅವನನ್ನು ಹೇಗೆ ಬಂಧಿಸಲು ಸಾಧ್ಯ? ಇದನ್ನು ಸೂಚಿಸಲೆಂದೇ ಎರಡು ಅಂಗುಲ ಕಡಮೆಯಾಗುತ್ತಿತ್ತು. ಅಷ್ಟೇ ಅಲ್ಲದೆ ಬಂಧಿಸಲು ಉಪಯೋಗಿಸುವ ಹಗ್ಗದಲ್ಲೂ, ಕಟ್ಟಬೇಕಾದ ಒರಳಿನಲ್ಲೂ ಅವನೇ ಇರುವುದರಿಂದ ತನ್ನನ್ನು ತಾನೇ ಹೇಗೆ ಬಂಧಿಸಲು ಸಾಧ್ಯ? ಗೋವುಗಳನ್ನು ಕಟ್ಟುವ ಹಗ್ಗದಿಂದ ಗೋಪತಿಯನ್ನು ಬಂಧಿಸುತ್ತೇನೆ ಎಂದುಕೊಂಡ ಯಶೋದೆಯ ಯೋಚನೆ ಹಾಸ್ಯಾಸ್ಪದ ಅಲ್ಲವೆ? ವೇದಾಂತ ಸಿದ್ಧಾಂತದ ಪ್ರಕಾರ ಅಧ್ಯಸ್ಥ ಪ್ರಪಂಚವನ್ನು ಬಂಧಿಸಬಹುದೇ ಹೊರತು ಅಧಿಷ್ಠಾನವನ್ನಲ್ಲ, ಪರಮಾತ್ಮನ ಹೊಟ್ಟೆ ಯನ್ನಲ್ಲ. ಅನಂತ ಕೋಟಿ ಬ್ರಹ್ಮಾಂಡಕ್ಕೆ ಅಧಿಷ್ಠಾನವಾಗಿರುವಾಗ ಆ ಹೊಟ್ಟೆಯನ್ನು ಹೇಗೆ ಕಟ್ಟಲು ಸಾಧ್ಯ?

ಇನ್ನೂ ಒಂದು ವಿಚಾರ ಭಗವಂತನಿಗೂ ಶುದ್ಧ ಸಾತ್ವಿಕ ಭಕ್ತನಿಗೂ ಸಂಬಂಧ (ಬಂಧನ) ಉಂಟುಮಾಡಲು ಸಾಧ್ಯ. ದೇಹಧಾರಿ ಭಗವಂತ ಶುದ್ಧ ಸಾತ್ವಿಕ ರೂಪ. ಹಗ್ಗವೋ ತಮೋಗುಣದಿಂದ ಕೂಡಿದ್ದು. ಇವರಿಬ್ಬರಿಗೆ ಸಂಬಂಧ (ಬಂಧನ) ಹೇಗೆ ತರಲು ಸಾಧ್ಯ? ಬಂಧನವೆನ್ನುವುದು ನಾಮರೂಪ ಇರುವ ಕಡೆ ಮಾತ್ರ ಸಾಧ್ಯ. ಭಗವಂತನು ನಾಮರೂಪರಹಿತನು. ಆದುದರಿಂದ ಅವನನ್ನು ಬಂಧಿಸಲು ಸಾಧ್ಯವೇ? ಅಲ್ಲದೆ ಸಾಧಾರಣವಾಗಿ ಬಂಧನಕ್ಕೆ ಕಾರಣ ರಾಗ ಹಾಗೂ ದ್ವೇಷ . ರಾಗದ್ವೇಷವಿಮುಕ್ತನಾದ ಭಗವಂತನನ್ನು ಬಂಧಿಸಲು ಸಾಧ್ಯವೇ?

ಹಾಗಾದರೆ ಭಗವಂತನನ್ನು ಬಂಧಿಸಲು ಸಾಧ್ಯವೇ ಇಲ್ಲವೆ? ಇದೆ, ಎರಡು ಮಾರ್ಗಗಳು ಉಂಟು. ಅದನ್ನು ಗೋಪ್ಯವಾಗಿ ಸೂಚಿಸಲು ಎರಡು ಅಂಗುಲದಷ್ಟು ಕಡಮೆಯಾಗುತ್ತಿತ್ತು. ಮೊದಲನೆಯದು, ಸಮಸ್ತ ಸಂಸ್ಕಾರಗಳಿಂದ ಮನಸ್ಸು ವಿಮುಕ್ತವಾಗಿ ಅದು ಭಗವದಭಿಮುಖವಾಗುವಂತೆ ಮಾಡುವುದು. ಅಂತಹ ಭಕ್ತನು ನನಗೆ ಅತಿಪ್ರಿಯನು ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಪ್ರೇಮದಿಂದ ಭಕ್ತನೊಡನೆ ತಾನೇ ಬಂಧಿತನಾಗಿಬಿಡುತ್ತಾನೆ. ಎರಡನೆಯದು, ಸಮಸ್ತ ವಸ್ತುಗಳಲ್ಲೂ ಭಗವಂತನಿದ್ದಾನೆ ಎಂದು ನಂಬಿ ಪ್ರೇಮಿಸಿ ಅವನೊಡನೆ ಒಂದಾಗಿ

ಬಿಡುವುದು. ಅಂತಹ ಭಕ್ತನೊಡನೆ ಭಗವಂತನಾದ ಶ್ರೀಕೃಷ್ಣನು ತನ್ನನ್ನು ತಾನೇ ಬಂಧಿಸಿಕೊಂಡುಬಿಡುತ್ತಾನೆ. ಈ ಎರಡೂ ಮಾರ್ಗಗಳನ್ನು ಅರಿಯದ ಯಶೋದೆ ಅವನನ್ನು ಬಂಧಿಸಲು ವಿಫಲಳಾಗಿದ್ದಳು.

ನಾವು ಭಾಗವತದಲ್ಲಿ ಓದುತ್ತೇವೆ, ಕೊನೆಗೆ ಶ್ರೀಕೃಷ್ಣನನ್ನು ಕಟ್ಟುವುದರಲ್ಲಿ ಯಶೋದೆ ಸಫಲಳಾದಳು ಎಂದು. ಅದು ಹೇಗೆ ಸಾಧ್ಯವಾಯಿತು ಎಂಬುದನ್ನೂ ನೋಡೋಣ. ಯಶೋದೆ ಅತ್ತ ಇತ್ತ ಓಡಾಡಿ ಬೇಕಾದಷ್ಟು ಹಗ್ಗವನ್ನು ತರುತ್ತಿದ್ದಳು. ಯಶೋದೆಯ ಈ ಕಾರ್ಯವನ್ನು ಕಂಡ ಕೃಷ್ಣನ ಪುಟ್ಟ ಸ್ನೇಹಿತರು ಗಾಬರಿಗೊಂಡು ತಮ್ಮ ಮನೆಗಳಿಗೆ ಹೋಗಿ ಅವರ ತಾಯಂದಿರಿಗೆ ವಿಷಯವನ್ನು ನಾನಾರೂಪವಾಗಿ ಬಣ್ಣಿಸಿದರು. ತಮ್ಮ ಕೃಷ್ಣ ಶಿಕ್ಷಿಸಲ್ಪಡುತ್ತಾನೆ ಎಂದು ಕೇಳಿದ ಕೂಡಲೇ ಗೋಪಿಕೆಯರೆಲ್ಲ ತಮ್ಮ ತಮ್ಮ ಕೆಲಸಗಳನ್ನು ಅಲ್ಲೇ ಬಿಟ್ಟು ದುಃಖದಿಂದ ಯಶೋದೆಯ ಮನೆಗೆ ಓಡಿಬಂದು, "ಯಶೋದೆ, ಏನು ಕೆಲಸ ಮಾಡುತ್ತಿದ್ದೀಯೆ? ಆ ಮುಗ್ಧ ಬಾಲಕನನ್ನು ಹೀಗೆ ಹಿಂಸಿಸುವುದೆ? ಅವನ ಪಾಡಿಗೆ ಅವನನ್ನು ಬಿಟ್ಟುಬಿಡು" ಎಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ಇದನ್ನು ಕೇಳಿದ ಯಶೋದೆಯ ಮನಸ್ಸಿಗೆ ಚುಚ್ಚಿದಂತಾಯಿತು. ಆದರೂ ಇನ್ನೂ ಸ್ವಾಭಿಮಾನ ಹೋಗಿರದ ಯಶೋದೆ ಅವರನ್ನು ಕುರಿತು ಹೇಳಿದಳು: "ಏನು? ನೀವು ನನಗೆ ಬುದ್ಧಿ ಹೇಳಲು ಬಂದಿದ್ದೀರಾ? ಸಾಕು, ಸಾಕು. ಹೋಗಿ, ನಿನ್ನೆ ತಾನೆ ನನ್ನ ಮಗನ ಮೇಲೆ ಎಷ್ಟೆಲ್ಲಾ ದೂರು ತಂದಿರಿ?" ಅದಕ್ಕೆ ಅವರೆನ್ನುತ್ತಾರೆ, "ನಿಜ, ಅವನು ಮಾಡಿದ ತುಂಟಾಟವನ್ನು ಹೇಳಿದೆವು ಅಷ್ಟೆ. ಅದರಿಂದ ನಮ್ಮ ಮನಸ್ಸಿಗೆ ಸಂತೋಷವಾಗುತ್ತಿತ್ತೇ ವಿನಾ ದುಃಖವಾಗುತ್ತಿರಲಿಲ್ಲ. ಅಲ್ಲದೆ ಅವನನ್ನು ಶಿಕ್ಷಿಸು ಎಂದು ಹೇಳಲಿಲ್ಲವಲ್ಲ. ನಮಗೆಲ್ಲ ಶ್ರೀಕೃಷ್ಣನೇ ಪ್ರಾಣ. ಅವನು ನಿನ್ನ ಮಡಕೆ ಒಡೆದು ಬೆಣ್ಣೆ ತಿಂದು ನಷ್ಟ ಮಾಡಿದ್ದರೆ ನಾವು ಆ ನಷ್ಟವನ್ನು ಭರ್ತಿ ಮಾಡುತ್ತೇವೆ. ಅವನಿಗೆ ಮಾತ್ರ ಏನೂ ಮಾಡಬೇಡ." ಗಲಿಬಿಲಿಯಲ್ಲಿದ್ದ ಯಶೋದೆ ಏನೂ ತೋಚದೆ, "ನೀವೆಲ್ಲ ಹೊರಟುಹೋಗಿ, ಅವನಿಗೆ ಹೇಗೆ ಬುದ್ಧಿ ಹೇಳಬೇಕು ಎಂದು ನನಗೆ ಗೊತ್ತು" ಎಂದಳು. ಹೀಗೆ ಹೇಳಿ ಮತ್ತೆ ಹಗ್ಗ ಹುಡುಕುವುದರಲ್ಲಿ ತೊಡಗಿದಳು. ಆದರೆ ಅದೇ ಎರಡಂಗುಲದ ಪ್ರಶ್ನೆ. ಇವಳ ಪರಿಸ್ಥಿತಿಯನ್ನು ನೋಡಿ ಗೋಪಿಯರೆಲ್ಲಾ ನಗಲಾರಂಭಿಸಿದರು. ಇವರ ನಗುವನ್ನು ನೋಡಿ ಯಶೋದೆ ಏನೂ ಮಾಡಲು ತೋಚದೆ ಸ್ವಾಭಿಮಾನವನ್ನು ಬಿಟ್ಟು ಅವರೊಡನೆ ತಾನೂ ನಗಲಾರಂಭಿಸಿದಳು.

ಕೃಷ್ಣನಿಗೂ ಯಶೋದೆಗೂ ಮಧ್ಯೆ ಅಂತರವಿದ್ದುದಕ್ಕೆ ಕಾರಣ ಅವಳ ಸ್ವಾಭಿಮಾನ. ಅವಳ ಸ್ವಾಭಿಮಾನ ದೂರವಾದ ಕೂಡಲೇ ಶ್ರೀಕೃಷ್ಣ ಅವಳ ಮೇಲೆ ಕೃಪೆ ತೋರಿದ. **ದೃಷ್ಟ್ವಾ ಪರಿಶ್ರಮಂ ಕೃಷ್ಣಃ ಕೃಪಯಾ ಆಸೀತ್ ಸ್ವಬಂಧನೇ**—ತನ್ನ ತಾಯಿಯ ಪರಿಶ್ರಮವನ್ನು ಕಂಡು ಕನಿಕರದಿಂದ ತನ್ನನ್ನು ಕಟ್ಟಲು ತಾನಾಗಿಯೇ ಒಳಗಾದನು.

ಇದು ಎರಡು ವಿಷಯಗಳನ್ನು ಸೂಚಿಸುತ್ತದೆ. ಮೊದಲನೆಯದು ಭಗವಂತ ನಮ್ಮಿಂದ ದೂರವಾಗಿರುವುದಕ್ಕೆ ಕಾರಣ ನಮ್ಮ ಸ್ವಾಭಿಮಾನ. ಸ್ವಾಭಿಮಾನವನ್ನು ಬಿಟ್ಟರೆ ಭಗವಂತನ ಕೃಪೆ ತಕ್ಷಣ ನಮ್ಮ ಮೇಲೆ ಬರುತ್ತದೆ. ಎರಡನೆಯದು, ಭಗವಂತನಿಗಾಗಿ ತೀವ್ರ ಸಾಧನೆ ಮಾಡಬೇಕು. ಆ ಸಾಧನೆಯಲ್ಲಿ ದೇಹ ಜರ್ಝರಿತವಾದಾಗ ಭಗವಂತ ತಾನಾಗಿಯೇ ಬರುತ್ತಾನೆ. ಯಶೋದೆ ಅವನನ್ನು ಕಟ್ಟಲು ಏಕಮನಸ್ಸಿನಿಂದ ಎಷ್ಟೆಲ್ಲಾ ಯತ್ನಿಸಿದಳು. ಕೊನೆಗೆ ಸುಸ್ತಾಗಿ ನಾನೇನೂ ಮಾಡಲಾರೆ ಎಂದೆನಿಸಿದಾಗ ಶ್ರೀಕೃಷ್ಣನ ಕೃಪೆ ಅವಳ ಮೇಲೆ ಬಿದ್ದಿತು. ಅವಳನ್ನು ಸಂತೋಷಪಡಿಸಲು ಅವಳಿಂದ ಕಟ್ಟಿಸಿಕೊಂಡ.

ಹೀಗೆ ಕಟ್ಟಿಸಿಕೊಂಡ ನಂತರ ಶ್ರೀಕೃಷ್ಣನು ತನ್ನ ದೃಷ್ಟಿಯನ್ನು ಹೊರಹಾಯಿಸಿದನು. ಅಲ್ಲಿ ಬೆಣ್ಣೆಯನ್ನು ಪಡೆದು ತಿಂದಿದ್ದ ಕೋತಿಯು ಒಂದು ಮರದ ಮೇಲೆ ಕುಳಿತು ಇವನನ್ನೇ ನೋಡುತ್ತಿತ್ತು. ಕೃಷ್ಣ ಅದಕ್ಕೆ ಹೇಳಿದ: "ನೋಡು, ನನ್ನ ಅವಸ್ಥೆಯನ್ನು, ಬೆಣ್ಣೆ ತಿಂದವನು ನೀನು, ಏಟು ಬಿದ್ದದ್ದು ನನಗೆ." ಅದನ್ನು ಕೇಳಿ ಮಂಗನ ಕಣ್ಣಿನಲ್ಲಿ ನೀರು ಬಂತು. ಅದನ್ನು ಸಹಿಸಲಾಗದ ಕೃಷ್ಣ ತನ್ನ ಕಣ್ಣಿನ ನೋಟದಿಂದಲೇ ಆ ಕೋತಿಯನ್ನು ಸಮಾಧಾನಪಡಿಸಿದ. ಶ್ರೀಕೃಷ್ಣನ ಭಕ್ತಪರಾಧೀನತೆ ಬರಿಯ ಮನುಷ್ಯರಿಗೆ ಸೀಮಿತವಾಗಿರದೆ ಎಲ್ಲ ಪ್ರಾಣಿಗಳಿಗೂ ಲಭ್ಯವಾಗಿತ್ತು. ಭಗವಂತನಲ್ಲಿ ಸಂಪೂರ್ಣ ಶರಣು ಹೋಗಬೇಕಷ್ಟೆ.

ಶುಕಮಹರ್ಷಿಗಳು ಈ ದಾಮೋದರ ಲೀಲೆಯ ವರ್ಣನೆಯನ್ನು ಮುಗಿಸಿ, ಕಣ್ಣುಮುಚ್ಚಿಕೊಂಡು ಕೊಂಚ ಧ್ಯಾನಸ್ಥರಾದರು. ಅನಂತರ ನಿಧಾನವಾಗಿ ಕಣ್ಣು ತೆರೆದು ಎದುರಿಗೆ ಅತ್ಯಂತ ಭಕ್ತಿಶ್ರದ್ಧೆಯಿಂದ ಕುಳಿತಿದ್ದ ಪರೀಕ್ಷಿತ ಮಹಾರಾಜನಿಗೆ ಹೇಳಿದರು: **ಗೋಪೀ ವಿಮುಕ್ತಿದಾತ್ ಯಂ ಪ್ರಸಾದಂ ಪ್ರಾಪ, ತಂ ಇಮಂ ವಿರಂಚಿಃ ನ, ಭವಃ ನ ಅಂಗಸಂಶ್ರಯಾ ಶ್ರೀರಪಿ ನ ಲೇಭಿರೇ** ।— "ಯಶೋದೆಯು ಮುಕ್ತಿದಾಯಕನಾದ ಭಗವಂತನಿಂದ ಯಾವ ಅನುಗ್ರಹವನ್ನು ಪಡೆದಳೋ ಅಂತಹ ಅನುಗ್ರಹವನ್ನು ಬ್ರಹ್ಮದೇವನೂ ಪಡೆಯಲಿಲ್ಲ, ಶಿವನೂ ಪಡೆಯಲಿಲ್ಲ, ನಿರಂತರ ವಿಷ್ಣುವಕ್ಷಃಸ್ಥಳನಿವಾಸಿನಿಯಾದ ಶ್ರೀಮಹಾಲಕ್ಷ್ಮಿಯೂ ಪಡೆಯಲಿಲ್ಲ." ಆಗ ಅವರ ಮುಂದೆ ಕುಳಿತಿದ್ದ ಎಲ್ಲ ಮುನಿಗಳ ಕಣ್ಣಲ್ಲೂ ಆನಂದಬಾಷ್ಪ ತುಂಬಿ ಹರಿಯುತ್ತಿತ್ತು.

ಈ ಘಟನೆಯನ್ನು ಕುರಿತು ಮಧುಸೂದನ ಸರಸ್ವತಿಯವರು ತಮ್ಮ ಮಂದಾಕಿನೀ ಸ್ತೋತ್ರದಲ್ಲಿ ಹೀಗೆ ಬರೆಯುತ್ತಾರೆ: "ಭಗವಂತನನ್ನು ದ್ವೇಷದಿಂದ ಬಂಧಿಸಲು ದುರ್ಮಾರ್ಗಿಯೂ ದುಷ್ಟನೂ ಆದ ದುರ್ಯೋಧನನು ಪ್ರಯತ್ನಿಸಿದನು. ಅದರ ಫಲವಾಗಿ ಅವನು ಮತ್ತು ಅವನ ಬಂಧುಜನರು ಎಲ್ಲರೂ ನಾಶವಾದರು. ಆದರೆ ಪ್ರೇಮದಿಂದ ಅಂತಹ ಭಗವಂತನನ್ನು ಬಂಧಿಸಲು ಯತ್ನಿಸಿ ಯಶಸ್ವಿಯಾದಳು ಯಶೋದೆ. ಇದರ ಫಲವೇನಾಯಿತು? ಸಮಸ್ತ ದೇವತೆಗಳಿಂದಲೂ ಇವಳು ಸ್ತುತಿಸಲ್ಪಟ್ಟಳು. ಹಾಗೆ ಬಂಧಿತನಾದ ಮುಕುಂದನನ್ನು ನಮಸ್ಕರಿಸುತ್ತಾ ಯಶೋದೆಯ ಭಕ್ತಿಭಾವಕ್ಕೂ ತಲೆಬಾಗಿ ನಮಸ್ಕರಿಸುತ್ತೇನೆ."